ರಾಜ್ಯದಲ್ಲಿ ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರುಗಳ ಹುದ್ದೆಗಳ ಜಿಲ್ಲಾವಾರು ವಿವರಗಳು

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಇರುವ ಹುದ್ದೆಗಳ ಸಂಖ್ಯೆ
೧	೨	೩
೧	ಬೆಂಗಳೂರು ಗ್ರಾ. ಜಿಲ್ಲೆ	೩೧೦
೨	ಬೆಂಗಳೂರು ದಕ್ಷಿಣ ಜಿಲ್ಲೆ	—
೩	ಚಿತ್ರದುರ್ಗ	೨೨೪
೪	ಕೋಲಾರ	೩೦೦
೫	ಶಿವಮೊಗ್ಗ	೨೫೫
೬	ತುಮಕೂರು	೩೪೨
೭	ಮೈಸೂರು	೩೫೫
೮	ಮಂಡ್ಯ	೩೨೬
೯	ದಕ್ಷಿಣ ಕನ್ನಡ	೧೫೦
೧೦	ಹಾಸನ	೨೨೦
೧೧	ಚಿಕ್ಕಮಗಳೂರು	೨೦೦
೧೨	ಕೊಡಗು	೮೬
೧೩	ಬೆಳಗಾಂ	೩೭೪
೧೪	ಬಿಜಾಪುರ	೩೧೬
೧೫	ಧಾರವಾಡ	೪೧೦
೧೬	ಉತ್ತರ ಕನ್ನಡ	೧೪೬
೧೭	ಗುಲ್ಬರ್ಗಾ	೨೧೨
೧೮	ರಾಯಚೂರು	೨೫೬
೧೯	ಬಳ್ಳಾರಿ	೧೬೧
೨೦	ಬೀದರ್	೧೬೦
೨೧	ಬೆಂಗಳೂರು ಉತ್ತರ	—
	ಒಟ್ಟು	೪೮೦೭

ಪ್ರೌಢಶಾಲೆಗಳಲ್ಲಿ ಉಪಾಧ್ಯಾಯರ ಕೊರತೆ

೧೭೬೦. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಪ್ರೌಢಶಾಲೆಗಳಲ್ಲಿ ಉಪಾಧ್ಯಾಯರುಗಳ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರವು ಕ್ರಮ ಕೈಗೊಳ್ಳಲಿದೆಯೇ?

ಶ್ರೀ ಬಿ. ಸೋಮಶೇಖರ್(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು).—

ಅ) ಬಂದಿದೆ.

ಆ) ಈಗಾಗಲೇ ಜಿಲ್ಲಾ ಆಯ್ಕೆ ಸಮಿತಿಗಳನ್ನು ರಚಿಸಲಾಗಿದೆ, ಸಮಿತಿಗಳು ಅರ್ಜಿಗಳನ್ನು ಕರೆದು ಅರ್ಜಿಗಳ ಪರಿಶೀಲನಾ ಕಾರ್ಯವು ನಡೆದಿದೆ. ಕೂಡಲೇ ಸಂದರ್ಶನಗಳನ್ನು ನಡೆಸಿ ಹುದ್ದೆಗಳನ್ನು ಭರ್ತಿ ಮಾಡಲು ಆಯ್ಕೆ ಸಮಿತಿಗಳಿಗೆ ನಿರ್ದೇಶನ ನೀಡಲಾಗಿದೆ.